**ಸುದ್ದಿ ಸಂಚಯ**

# ‘ಅಮೃತ ಮಹೋತ್ಸವ’

## ಮಂಗಳೂರು ರಾಮಕೃಷ್ಣ ಮಠದ ೭೫ನೇ ವರ್ಷದ ಸಂಭ್ರಮಾಚರಣೆ







**ಮಂ**ಗಳೂರಿನ ರಾಮಕೃಷ್ಣ ಮಠವು ಪ್ರಾರಂಭವಾಗಿ ೭೫ ಸಂವತ್ಸರಗಳು ಪೂರ್ಣಗೊಂಡಿವೆ. ಈ ಪ್ರಯುಕ್ತ ಮಂಗಳೂರಿನ ರಾಮಕೃಷ್ಣ ಮಠದಲ್ಲಿ ‘**ಅಮೃತ ಮಹೋತ್ಸವ**’ ಎಂಬ ಸಂಭ್ರಮಾಚರಣೆಯನ್ನು ಆಯೋಜಿಸಲಾಗಿತ್ತು. ಜೂನ್ ೩ ಮತ್ತು ೪ರ ೨೦೨೨ರಂದು ‘**ಅಮೃತ ಸಂಗಮ**’ ಎಂಬ ರಾಜ್ಯ ಮಟ್ಟದ ಸಾಧು ಭಕ್ತ ಸಮ್ಮೇಳನದಲ್ಲಿ **ಸರಳತೆ**ಯೆಂಬ ಪರಿಕಲ್ಪನೆಯೊಂದಿಗೆ ಎರಡು ದಿನಗಳ ಕಾಲ ಚಿಂತನ-ಮಂಥನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವು ೬ ಗೋಷ್ಠಿಗಳಲ್ಲಿ ೨೨ ಉಪನ್ಯಾಸಗಳನ್ನು ಒಳಗೊಂಡಿತ್ತು. ನಾಡಿನ ಉತ್ತಮ ಚಿಂತಕರು, ವಾಗ್ಮಿಗಳು, ಸಾಹಿತಿಗಳು ಹಾಗೂ ಯತಿವರೇಣ್ಯರಿಂದ ಸರಳತೆಯ ಕುರಿತಾಗಿ ವಿದ್ವತ್ಪೂರ್ಣವಾದ ವಿಚಾರ-ವಿಮರ್ಶೆ ಹಾಗೂ ಮಂಡನೆ ಜರುಗಿತು. ಸುಮಾರು ೧೫೦೦ ಭಕ್ತರು ಈ ಸಮ್ಮೇಳನದಲ್ಲಿ ಪಾಲ್ಗೊಂಡು ಇದರ ಪ್ರಯೋಜನ ಪಡೆದರು. ಸುಮಾರು ೨೫೦ ಸ್ವಯಂಸೇವಕರು ಈ ಕಾರ್ಯಕ್ರಮದ ಯಶಸ್ಸಿಗಾಗಿ ಹಗಲಿರುಳು ಪರಿಶ್ರಮಿಸಿದ್ದರು.

ಜೂನ್ ೩, ೨೦೨೨ರ ಶುಕ್ರವಾರದಂದು ಮುಂಜಾನೆ ೬.೩೦ಕ್ಕೆ ಶ್ರೀರಾಮಕೃಷ್ಣರ ವಿಶೇಷ ಪೂಜೆ ಹಾಗೂ ಹೋಮದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಬೆಳಿಗ್ಗೆ ೯ ಗಂಟೆಗೆ ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ತರುವಾಯ, ಮಠದ ಮಹಾದ್ವಾರದವರೆಗೂ ಸಾಧು-ಭಕ್ತರ ವಿಶೇಷ ಶೋಭಾಯಾತ್ರೆ ಹಾಗೂ ಪೂರ್ಣಕುಂಭ ಸ್ವಾಗತ ಜರುಗಿತು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರಿಂದ ‘**ಅಮೃತ ಪಥ**’ ಎಂಬ ನೂತನ ಮಹಾದ್ವಾರದ ಲೋಕಾರ್ಪಣೆ, ‘**ಅಮೃತ ಸದನ**’ ಎಂಬ ಸ್ವಾಮಿ ವೀರೇಶ್ವರಾನಂದ ಸಾಧುನಿವಾಸದ ಉದ್ಘಾಟನೆ ನೆರವೇರಿತು. ಈ ಸಂದರ್ಭ ದಲ್ಲಿ ‘**ಅಮೃತ ಭವನ**’ ಎಂಬ ಸ್ವಾಮಿ ವಿವೇಕಾನಂದ ತರಬೇತಿ ಕೇಂದ್ರದ ನೂತನ ಕಟ್ಟಡದ ಭೂಮಿಪೂಜೆಯನ್ನು ಕೂಡ ಹಮ್ಮಿಕೊಳ್ಳಲಾಗಿತ್ತು.

ಉದ್ಘಾಟನಾ ಸಮಾರಂಭದ ಸ್ವಾಗತವನ್ನು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ನಿಕಟಪೂರ್ವ ಶಾಸಕರು) ನೆರವೇರಿಸಿದರು. ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ದಿವ್ಯಸನ್ನಿಧಾನದಲ್ಲಿ ಕಾರ್ಯಕ್ರಮ ಜರುಗಿತು. ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಜಿತಕಾಮಾನಂದಜಿಯವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ರಾಮಕೃಷ್ಣ ಮಹಾಸಂಘದ ವಿಶ್ವಸ್ಥರಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜಿ ‘**ಅಮೃತತ್ತ್ವ**’ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ನಿಟ್ಟೆ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಡಾ. ಎನ್. ವಿನಯ್ ಹೆಗ್ಡೆ ಅವರು ಮಠದ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದರು. ಸನ್ಮಾನ್ಯ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರಮಾನ್ಯ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲು ಅವರು ಮಠದ ವೆಬ್‌ಸೈಟಿನ ಲೋಕಾರ್ಪಣೆ ಮಾಡಿದರು. ಕರ್ನಾಟಕ ವೃತ್ತದ ಪ್ರಧಾನ ಪೋಸ್ಟ್ ಮಾಸ್ಟರ್ ಜನರಲ್ ಆದ ಶ್ರೀ ಎಸ್. ರಾಜೇಂದ್ರ ಕುಮಾರ್ ಅವರು ಮಠದ ಚಿತ್ರವನ್ನುಳ್ಳ ವಿಶೇಷ ಅಂಚೆ ಲಕೋಟೆಯನ್ನು ಹಸ್ತಾಂತರಿಸಿದರು.

ರಾಮಕೃಷ್ಣ ಮಹಾಸಂಘದ ಯತಿಗಳು, ಭಾವಪ್ರಚಾರ ಪರಿಷತ್ತಿನ ಯತಿಗಳು ಹಾಗೂ ಶ್ರೀಮಾತಾ ಆಶ್ರಮದ ಮಾತಾಜಿಯವರುಗಳು ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದರು. ಸುಮಾರು ೭೫ ಯತಿಗಳಿಗೆ ಜೂನ್ ೩ರ ಸಂಜೆ ಯತಿಪೂಜೆಯನ್ನು ಸಲ್ಲಿಸಲಾಯಿತು. ಜೂನ್ ೪ರಂದು ಸಂಜೆ ನಡೆದ ಸಮಾರೋಪ ಸಮಾರಂಭದೊಂದಿಗೆ ಅಮೃತ ಮಹೋತ್ಸವವು ಪೂರ್ಣಗೊಂಡಿತು.





Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020